ಕ್ರಮ ಸಂಖ್ಯೆ: 14

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನಾಲ್ಕನೇ ಅಧಿವೇಶನ**

# ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-32)**

ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು (1986ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **4ನೇ ಪ್ರಕರಣದ ತಿದ್ದುಪಡಿ.**- ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ರ (1986ರ ಕರ್ನಾಟಕ ಅಧಿನಿಯಮ 22) 4ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಈ ಅಧಿನಿಯಮ ಮತ್ತು ಅದರ ಅಡಿಯಲ್ಲಿ ಮಾಡಿದ ವಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ವಿದ್ಯಾಲಯವು ಶೇಕಡ ಮೂವತ್ತಕ್ಕಿಂತ ಕಡಿಮೆಯಲ್ಲದಷ್ಟು ಸೀಟುಗಳನ್ನು ಕರ್ನಾಟಕ ನಿವಾಸಿ ವಿದ್ಯಾರ್ಥಿಗಳಿಗೆ ಮೀಸಲಿರಿಸತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ 'ಕರ್ನಾಟಕ ನಿವಾಸಿ ವಿದ್ಯಾರ್ಥಿ' ಎಂದರೆ,-

(i) ಅರ್ಹತಾ ಪರೀಕ್ಷೆಯ ಹಿಂದಿನ ಹತ್ತು ವರ್ಷಗಳಿಗೆ ಕಡಿಮೆಯಲ್ಲದ ಅವಧಿಯವರೆಗೆ ವಿದ್ಯಾರ್ಥಿ ಅಥವಾ ಆತನ ತಂದೆ ಅಥವಾ ತಾಯಿ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರಬೇಕು; ಮತ್ತು

(ii) ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯ ಹಿಂದಿನ ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗಾಗಿ ಕರ್ನಾಟಕ ರಾಜ್ಯದಲ್ಲಿರುವ ಮಾನ್ಯತೆ ಪಡೆದ ಯಾವುದಾದರೂ ಒಂದು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನಿವಾಸಿ ವಿದ್ಯಾರ್ಥಿಗಳಿಗಾಗಿ ಶೇಕಡ ಮೂವತ್ತಕ್ಕಿಂತ ಕಡಿಮೆಯಿಲ್ಲದ ಸೀಟುಗಳನ್ನು ಮೀಸಲಿರಿಸಲು ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

(ತಾತ್ಕಾಲಿಕವಾಗಿ ಅಂಗೀಕರಿಸಲಾಗಿದೆ)

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿನಾಲ್ಕನೇ ಅಧಿವೇಶನ**

ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017ಕ್ಕೆ (2017ರ ವಿಧಾನಸಭೆ ವಿಧೇಯಕ ಸಂಖ್ಯೆ: 32) ತಿದ್ದುಪಡಿ.

ಶ್ರೀ ಬಸವರಾಜ ರಾಯರೆಡ್ಡಿ, ಉನ್ನತ ಶಿಕ್ಷಣ ಮಂತ್ರಿಗಳು ಇವರಿಂದ

ಶ್ರೀ ಟಿ.ಬಿ.ಜಯಚಂದ್ರ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಮಂತ್ರಿಗಳು, ಇವರ ಪರವಾಗಿ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017ಕ್ಕೆ (2017ರ ವಿಧಾನಸಭೆ ವಿಧೇಯಕ ಸಂಖ್ಯೆ: 32) ಈ ಮುಂದಿನ ತಿದ್ದುಪಡಿಯನ್ನು ತರುವ ನನ್ನ ಉದ್ದೇಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ, ಎಂದರೆ:-

**ಖಂಡ 2**

ಸದರಿ ವಿಧೇಯಕದ 2ನೇ ಖಂಡದಲ್ಲಿ, ಸೇರಿಸಲು ಉದ್ದೇಶಿಸಲಾದ 4ನೇ ಪ್ರಕರಣದಲ್ಲಿನ (3)ನೇ ಉಪಪ್ರಕರಣದಲ್ಲಿ,-

(i) "ಶೇಕಡ ಮೂವತ್ತಕ್ಕಿಂತ" ಎಂಬ ಪದಗಳಿಗೆ "ಶೇಕಡ ಐವತ್ತಕ್ಕಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ವಿವರಣೆಯಲ್ಲಿನ (ii)ನೇ ಬಾಬುವಿನಲ್ಲಿ "ಐದು ವರ್ಷಗಳಿಗೆ" ಎಂಬ ಪದಗಳಿಗೆ "ಏಳು ವರ್ಷಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರಭಾರ)

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಟಿ.ಬಿ. ಜಯಚಂದ್ರ**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಸಣ್ಣ ನೀರಾವರಿ ಮಂತ್ರಿಗಳು.

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ, 1986ರ (1986ರ ಕರ್ನಾಟಕ ಅಧಿನಿಯಮ 22)**

**ಉದ್ಧೃತ ಭಾಗ**

**xx** **xx** **xx**

**4. ವಿದ್ಯಾಲಯದ ಉದ್ದೇಶಗಳು ಇತ್ಯಾದಿ.–**

**xx** **xx** **xx**

(2) ವಿದ್ಯಾಲಯವು ಲಿಂಗಭೇದವಿಲ್ಲದೆ, ಜನಾಂಗ, ಪಂಥ, ಜಾತಿ ಅಥವಾ ವರ್ಗಗಳನ್ನು ಪರಿಗಣಿಸದೆ ಎಲ್ಲ ಧರ್ಮದ, ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು ಮತ್ತು ಯಾವೊಬ್ಬ ಅರ್ಹರಾಗಿರತಕ್ಕ ವ್ಯಕ್ತಿಗೆ ಅಲ್ಲಿಗೆ ಬೋಧಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ನೀಡಲು ಅಥವಾ ಅಲ್ಲಿ ಯಾವುದೇ ಪದವನ್ನು ಹೊಂದಲು ಅಥವಾ ಅಲ್ಲಿ ಪದವಿಯನ್ನು ಪಡೆಯಲು ಅಥವಾ ಅಲ್ಲಿನ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಧಾರ್ಮಿಕ ನಂಬಿಕೆಯ ಅಥವಾ ಉದ್ದೇಶಗಳ ಎಂಥದೇ ಪರೀಕ್ಷೆಯನ್ನು ವಿಧಿಸುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ.

**xx** **xx** **xx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , –ಪ್ರತಿಗಳು 1000, 19ನೇ ಜೂನ್ 2017

Serial No: (14)

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

# THE NATIONAL LAW SCHOOL OF INDIA (AMENDMENT) BILL, 2017

**(L.A. Bill No. 32 of 2017)**

A Bill further to amend the National Law School of India Act, 1986.

Whereas, it is expedient to amend the National Law School of India Act, 1986 (Karnataka Act 22 of 1986) for the purposes hereinafter appearing;

Be it enacted by the Karnataka State Legislature in the sixty eighth year of the Republic of India as follows.-

**1. Short title and commencement.**- (1) This Act may be called the National Law School of India (Amendment) Act, 2017.

(2) It shall come into force at once.

**2. Amendment of section 4.**- In section 4 of the National Law School of India Act, 1986 (Karnataka Act 22 of 1986) after sub-section (2), the following shall be inserted, namely:-

"(3) Notwithstanding anything contained in this Act and the regulations made thereunder, the school shall reserve not less than thirty percent of seats for resident students of Karnataka.

**Explanation**: For the purpose of section "resident student of Karnataka" means,-

(i) a student who or either of whose parents has resided in the State of Karnataka for a period of not less than ten years preceding the qualifying examination; and

(ii) a student who has studied in any one of the recognized educational institutions in the State for a period of not less than five years preceding to the qualifying examination."

**STATEMENT OF OBJECTS AND REASONS**

It is considered necessary to amend the National Law School of India Act, 1986, to reserve not less than thirty percent of seats for resident students of Karnataka.

Hence the Bill.

**(Provisionally admitted)**

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**FOURTEENTH SESSION**

**Amendments to the National Law School of India (Amendment) Bill, 2017 (L.A. Bill No. 32 of 2017).**

By Shri Basavaraj Rayareddy, Minister for Higher Education)

I on behalf of Shri T.B. Jayachandra, Minister for Law, Parliamentary Affairs and Minor Irrigation, hereby give notice of my intention to move the following amendments to the National Law School of India (Amendment) Bill, 2017 (L.A. Bill No. 32 of 2017), namely:-

**Clause 2**

In the said Bill, in clause 2, in section 4, in sub-section (3) sought to be inserted.-

(i) for the words "thirty percent" the words "fifty percent" shall be substituted; and

(ii) in explanation, in item (ii) for the words "five years" the words "seven years" shall be substituted.

**(S.MURTHY)**
**Secretary (I/C)**

**FINANCIAL MEMORANDUM**

There is no extra expenditure involved in the proposed Legislative measure.

**T.B.JAYACHANDRA**
Minister for Law, Parliamentary Affairs
and Minor Irrigation

**S. Murthy**
Secretary (I/c)
Karnataka Legislative Assembly

**ANNEXURE**

## Extract from the National Law School of India Act, 1986 (Karnataka Act No. 22 of 1986)

XX XX XX

4. The Objects of the School etc.-

XX XX XX

(2) The School shall be open to all persons of either sex irrespective of race, creed, caste or class of all religions and it shall not be lawful for the school to impose on any person any test whatsoever of religious belief or profession in order to entitle him to be admitted thereto as a teacher or a student or to hold any office therein or to graduate thereat or to enjoy or to exercise any privilege thereof.

XX XX XX

Government Press, Vikasa Soudha Unit, Bengaluru 19th June, 2017 P7, W.D., Copies 1000